ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ. ಪಿ. ಪ್ರಕಾಶ್: ದಿನಾಂಕ 15-9-95ರ 23 ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 101 ಪ್ರಶ್ನೆಗಳ ಪೈಕಿ, 75 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಮೈಸೂರು ಪೇಪರ್ ಮಿಲ್‌ನಿಂದ ಅರಣ್ಯ ಅಭಿವೃದ್ಧಿ

2027 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಪೇಪರ್ ಮಿಲ್ ಕಚ್ಚಾವಸ್ತು ತಯಾರಿಕೆಗಾಗಿ ಎಷ್ಟು ಎಕರೆ ಅರಣ್ಯವನ್ನು ಬೆಳೆಸುತ್ತಿದೆ; ಎಲ್ಲೆಲ್ಲಿ ಯಾವ ಗ್ರಾಮಗಳಲ್ಲಿ ಬೆಳೆಸಲಾಗುತ್ತಿದೆ?

ಆ) ಎಷ್ಟು ವರ್ಷಗಳಿಂದ ಅರಣ್ಯವನ್ನು ಬೆಳೆಸಲಾಗುತ್ತಿದೆ? ಇದುವರೆವಿಗೂ ಎಷ್ಟು ಹಣವನ್ನು ತೊಡಗಿಸಲಾಗಿದೆ? ಎಷ್ಟು ಕಚ್ಚಾವಸ್ತುವನ್ನು ತಯಾರಿಸಲಾಗಿದೆ?

ಇ) ಅರಣ್ಯ ಬೆಳೆಸುವ ಕಾರ್ಯದಲ್ಲಿ ಉತ್ತಮ ಫಲಿತಾಂಶ ಲಭ್ಯವಾಗಿದೆಯೇ? ಯಾವ ರೀತಿಯ ಫಲಿತಾಂಶ ದೊರೆತಿದೆ; ಇದರಿಂದಾಗಿ ಕಂಪನಿಗೆ ಆಗಿರುವ ಆರ್ಥಿಕ ಲಾಭ ಎಷ್ಟು; ಬೇರೆ ಯಾವ ರೀತಿಯ ಅನುಕೂಲಗಳು ಇದರಿಂದಾಗಿದೆ? (ವಿವರವಾದ ಮಾಹಿತಿ ನೀಡುವದು);

ಈ) ಅರಣ್ಯ ಅಭಿವೃದ್ಧಿಗೆ ಮತ್ತು ರಕ್ಷಣೆಗೆ ಎಷ್ಟು ಸಿಬ್ಬಂದಿಯನ್ನು ನೇಮಿಸಲಾಗಿದೆ; ಯಾವ ಯಾವ ರೀತಿಯ ಸಿಬ್ಬಂದಿ ತೊಡಗಿಸಲಾಗಿದೆ; ಅವರ ವೇತನ ಶ್ರೇಣಿ ಏನು (ವಿವರವಾದ ಮಾಹಿತಿ ನೀಡುವದು)?

ಉ) ಈ ಸಿಬ್ಬಂದಿಯ ಮಾಲಿಕರು ಮತ್ತು ಆಡಳಿತ ವರ್ಗ ಎಂ.ಪಿ.ಎಂ. ಎಂಬುದು ನಿಜವೇ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) 30,000 ಹೆಕ್ಟೇರ್ ಅರಣ್ಯವನ್ನು ಬೆಳೆಸುತ್ತಿದೆ. ಹೊಸನಗರ, ಸಾಗರ ತೀರ್ಥಹಳ್ಳಿ, ಶಿವಮೊಗ್ಗ, ಭದ್ರಾವತಿ, ಶಿಕಾರಿಪುರ, ತರೀಕೆರೆ ಮತ್ತು ಶೃಂಗೇರಿ ತಾಲ್ಲೂಕುಗಳ ಗ್ರಾಮಗಳಲ್ಲಿ ಬೆಳೆಸಲಾಗುತ್ತಿದೆ.

ಆ) 1981ನೇ ಇಸವಿಯಿಂದ ನೆಡುತೋಪುಗಳನ್ನು ಬೆಳೆಸುತ್ತಿದೆ. ಇದುವರೆಗೂ ರೂ. 5,463.84 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟು 4,75,838 ಮೆಟ್ರಿಕ್ ಟನ್ ಮರವನ್ನು ನೀಡುವದರ ಮೂಲಕ ಕಚ್ಚಾವಸ್ತುಗಳನ್ನು ತಯಾರಿಸಲಾಗಿದೆ.

ಇ) ಹೌದು. ಮುಕ್ತ ಮಾರುಕಟ್ಟೆಯಲ್ಲಿ ತಿರುಳು ಮರವು ಪ್ರತಿ ಟನ್‌ಗೆ ರೂ. 1250 ರಿಂದ ರೂ. 1350 ರವರೆಗೆ ಲಭ್ಯವಾಗುತ್ತದೆ. ಇದರ ಜೊತೆಗೆ ದಿನಗೂಲಿ ಉದ್ಯೋಗಾವಕಾಶಗಳು ಯೋಜನೆಯಡಿಯಲ್ಲಿ ಬರುವ ಎಲ್ಲಾ ಪ್ರದೇಶಗಳಲ್ಲೂ ಸ್ಥಿರ ರೀತಿಯಲ್ಲಿ ಲಭ್ಯವಾಗುತ್ತದೆ.